ಇದುವರೆಗೂ ಕೂಡ ಆ ಸಮಿತಿಯನ್ನು ತಾವು ರಚನೆ ಮಾಡಲಿಲ್ಲ. ನೀವು ಈ ಸಮಿತಿಗಳನ್ನು ಯಾವಾಗ ಮಾಡುತ್ತೀರಿ? ನೀವು ಮಾಡದೇ ಹೋದರೆ ಎಲ್ಲಿಯವರೆಗೆ ಇಂಥ ಕಿರುಕುಳವನ್ನು ಸಹಿಸುವುದು? ನಿರಂತರವಾಗಿ ಕಿರುಕುಳ ನಡೆಯುತ್ತಲೇ ಹೋಗುತ್ತದೆ . ಇದಕ್ಕೆ ಒಂದು ಇತಿಶ್ರೀಯನ್ನು ಹಾಡಬೇಕೆಂದರೆ ತಾವು ರೆಗ್ಯುಲರೈಸೇಷನ್ ಸಮಿತಿಯನ್ನಾದರೂ ಬೇಗ ಮಾಡಿ.

ಶ್ರೀ ಧರ್ಮಸಿಂಗ್ : ಸಮಿತಿಯನ್ನು ರಚನೆ ಮಾಡುವಂತೆ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ತಾವು ಅರ್ಜಿಯನ್ನೂ ಕೊಟ್ಟಿದ್ದೀರಿ. ಸ್ವಲ್ಪ ಮಟ್ಟಿನ ತೊಂದರೆಯಿಂದಾಗಿ ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಲಿಲ್ಲ . ಇನ್ನು 4-5 ದಿವಸದಲ್ಲಿ ನಾವು ಈ ಸಮಿತಿಯನ್ನು ರಚನೆ ಮಾಡುತ್ತೇವೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ನೆರೆ ಹಾಗೂ ಪ್ರವಾಹದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 124(155)

ಶ್ರೀ ವಿಜಯಕುಮಾರ ಶೆಟ್ಟಿ (ಸೂರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ನೆರೆ ಹಾಗೂ ಪ್ರವಾಹದಿಂದ ನಷ್ಟಕ್ಕೊಳಗಾದ ಕೃಷಿ ಫಸಲಿನ ಮೊತ್ತವೆಷ್ಟು?

ಆ) ಪ್ರವಾಹದಿಂದ ನಾಶವಾದ ಕೃಷಿ ಭೂಮಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು ?

ಇ) ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮ ಸಿಂಗ್ (ಕಂದಾಯ ಸಚಿವರು) :

ಅ) ನೆರೆ ಹಾವಳಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5002 ಹೆಕ್ಟೇರಿನಲ್ಲಿರುವ ಕೃಷಿ ಬೆಳೆಗೆ ಹಾನಿಯಾಗಿದ್ದು, ನಷ್ಟ ರೂ.716.22 ಲಕ್ಷಗಳೆಂದು ಅಂದಾಜಿಸಲಾಗಿದೆ.

ಆ) ಇದುವರೆವಿಗೂ ಹಾನಿಗೊಂಡ ಕೃಷಿ ಬೆಳೆ ಮತ್ತು ಭೂಮಿಗೆ ನೀಡಿರುವ ಪರಿಹಾರದ ಭೂಮಿಗೆ ನೀಡಿದ ಪರಿಹಾರ ರೂ 20.22 ಲಕ್ಷಗಳು.

ಇ) - ಇಲ್ಲ -

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ನೆರೆಹಾವಳಿಯಿಂದ ಸುಮಾರು 5002 ಹೆಕ್ಟೇರ್‌ನಲ್ಲಿದ್ದ ಕೃಷಿ ಬೆಳೆಗೆ ಹಾನಿಯಾಗಿದೆ. ಕೊಟ್ಟಿರುವ ಪರಿಹಾರ ಕೇವಲ 20.22 ಲಕ್ಷ ರೂ. ಮಾತ್ರ. ಆದರೆ ಆಗಿರುವಂಥ ನಷ್ಟ 716.22 ಲಕ್ಷ ರೂ. ನೀವು ಕೊಟ್ಟಿರುವ ಪರಿಹಾರ ಯಾವುದಕ್ಕೂ ಸಾಲದು. ಬಹಳ ಹಿಂದೆ ಸರ್ಕಾರದವರೇ ಒಂದು ಹೇಕ್ಟೇರ್‌ಗೆ 1000 ರೂ. ಹೂಳೆತ್ತಲು ಮತ್ತು 500 ರೂ. ಪರಿಹಾರ ಎಂದು ಒಂದು ರೇಟನ್ನು ನಿಗದಿ ಮಾಡಿದ್ದರು. ಇದು ಖಂಡಿತವಾಗಿ ಏನೇನೂ ಸಾಲುವುದಿಲ್ಲ. ಒಬ್ಬ ಕೃಷಿ

ಕಾರ್ಮಿಕನಿಗೆ 50 ರೂ. ನಂತೆ ಕೊಡಬೇಕಾಗಿದೆ. ಅಂದಮೇಲೆ ನಮ್ಮಲ್ಲಿ ಒಂದು ಹೆಕ್ಟೇರ್‌ಗೆ 200 ರೂ. ಕೂಡ ಬೀಳುವುದಿಲ್ಲ. ಸರ್ಕಾರ ಈ ವಿಚಾರವನ್ನು ಪುನರ್ ಪರಿಶೀಲಿಸಿ ಹಾನಿಗೊಳಗಾದ ಕೃಷಿಗೆ ಕೊಡುವಂಥ ಬೆಲೆ ಪರಿಹಾರ ಮತ್ತು ಹೂಳು ಎತ್ತುವುದಕ್ಕೆ ಹೆಚ್ಚು ಹಣವನ್ನು ಕೊಡಬೇಕು ತಾವು ಕೊಡುತ್ತಿರುವ ರೇಟನ್ನು ಹೆಚ್ಚುಮಾಡಬೇಕು. ನೀವು ಕೊಟ್ಟಿರತಕ್ಕ ಪರಿಹಾರ ಕೇವಲ 20.22 ಲಕ್ಷ ರೂ. ಆದರೆ ನಮ್ಮಲ್ಲಿ ಅಂಥಹ ಹಾನಿಯನ್ನು ನೋಡುವುದಕ್ಕೆ ಶಾಸಕರು, ಮಂತ್ರಿಗಳು ಬಂದು ನೋಡಿಕೊಂಡು ಹೋಗುವುದಕ್ಕೆ ಬಹುಶಃ 20 ಲಕ್ಷಕ್ಕಿಂತ ಹೆಚ್ಚಿಗೆ ಹಣ ಖರ್ಚಾಗಿದೆ. ನಮ್ಮ ಇಡೀ ಜಿಲ್ಲೆಗೆ ನೀವು 20 ಲಕ್ಷ ರೂ. ಕೊಟ್ಟಿದ್ದೀರಿ. ಇದು ಏನೇನು ಸಾಲದು. ಆಗಿರುವ ನಷ್ಟ 716 ಲಕ್ಷ ಎಂದು ನೀವೇ ಒಪ್ಪಿಕೊಂಡಿದ್ದೀರಿ. ಇದನ್ನು ಹೆಚ್ಚು ಮಾಡುವುದರ ಜೊತೆಗೆ ಹೂಳೆತ್ತಲು 1000 ರೂ.ಗಳು ಮತ್ತು ಪರಿಹಾರ 500 ರೂ. ಎಂದು ಏನು ರೇಟನ್ನು ನಿಗದಿ ಮಾಡಿದ್ದೀರಿ ಇದನ್ನು ಪುನರ್ ಪರೀಶಿಲನೆ ಮಾಡಬೇಕು.ಇದನ್ನು ಆದಷ್ಟು ಬೇಗ ಮಾಡಿದರೆ ಒಳ್ಳೆಯದು.

ಶ್ರೀ ಧರ್ಮಸಿಂಗ್ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಬಹಳಷ್ಟು ಕಡೆಗಳಲ್ಲಿ ಬೆಳೆಹಾನಿ ಹೆಚ್ಚಾಗಿದೆ. ಇದರಿಂದ ಹಾನಿಗೊಳಗಾದ ರೈತರಿಗೆ ಹೆಚ್ಚಿಗೆ ಪರಿಹಾರವನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ನೀವು ಕೊಟ್ಟಿರತಕ್ಕ 20 ಲಕ್ಷ ಏನೇನೂ ಸಾಲದು. ಇದನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಒಂದು ಹೆಕ್ಟರಿಗೆ 500 ರೂ.ಕೊಡಬೇಕೆಂದು ನಿಗದಿಮಾಡಿದ್ದೆವು. ಆದರೆ ರಾಷ್ಟ್ರಮಟ್ಟದಲ್ಲಿ ಒಂದು ಹೆಕ್ಟರಿಗೆ 200 ರೂ ನಂತೆ ಕೊಡಬೇಕೆಂದು ಏನು ನಿಗದಿ ಮಾಡಿದ್ದಾರೆ. ಅದನ್ನು 500 ರೂ ನಂತೆ ಆದರೂ ಕೊಡಬೇಕೆಂದು ನಮ್ಮ ರಾಜ್ಯಸರ್ಕಾರ ತೀರ್ಮಾನ ತೆಗೆದುಕೊಂಡಿದೆ.ಈವತ್ತು ರಾಜ್ಯದಲ್ಲಿ ಒಟ್ಟು ಎಷ್ಟು ಬೆಳೆ ಹಾನಿಯಾಗಿದೆ. ಅದರಲ್ಲಿ 75 ಪರ್‌ಸೆಂಟ್‌ನಷ್ಟು ಆದರೂ ಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ನಿನ್ನೆ 50 ಪರ್‌ಸೆಂಟಿಗೆ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾವು ಒಪ್ಪಿದ್ದೇವೆ. ಪದೇ ಪದೇ ರೈತರಿಗೆ ಆಗುತ್ತಿರುವ ತೊಂದರೆಗೆ ಕೇವಲ ಹಣ ಪರಿಹಾರವನ್ನು ಕೊಡುವುದೇ ಅಲ್ಲದೆ ಅವರು ಬೇಕಾದಂಥ ಸೀಡ್ಸ್ ಔಷದಿ ಇನ್ನು ಮುಂತಾದವುಗಳನ್ನು ಕೊಟ್ಟು ಹೆಚ್ಚಿನ ಸಹಾಯ ಮಾಡಬೇಕೆಂದು ಯೋಚಿಸಿ 24 ಕೋಟಿಯ ಅಗ್ರಿಕಲ್ಚರ್ ಪ್ಯಾಕೇಜ್ ಎಂದು ಮಾಡಿದ್ದೇವೆ. ಪದೇ ಪದೇ ಆಗುತ್ತಿರುವ ತೊಂದರೆಗಳನ್ನು ಶಾಶ್ವತವಾಗಿ ಪರಿಹರಿಸುವ ಯೋಜನೆಯನ್ನು ನಾವು ಮಾಡಿದ್ದೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮೊನ್ನೆ ಪ್ರಧಾನಮಂತ್ರಿಗಳು ಬಂದಾಗ....

ಅಧ್ಯಕ್ಷರು : ಕುಳಿತುಕೊಳ್ಳಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಸರ್ಕಾರ ಉತ್ತರ ಕೊಟ್ಟಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಕೇಂದ್ರಸರ್ಕಾರದಿಂದ ನಮಗೆ ಯಾವುದೇ ಪರಿಹಾರ ಬಂದಿಲ್ಲ ಎಂದು ಮುಖ್ಯಮಂತ್ರಿಯವರು ಪ್ರಧಾನಮಂತ್ರಿಯವರು ಬಂದಾಗ ಕರ್ನಾಟಕಕ್ಕೆ ಒಟ್ಟು 200 ಕೋಟಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ

ಅವರು ಏನಾದರೂ ಉತ್ತರ ಕೊಟ್ಟಿದ್ದಾರೋ? ಕೊಡುತ್ತೇವೆಂದು ಹೇಳಿದ್ದಾರೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು. 200 ಕೋಟಿ ರೂಪಾಯಿ ನಷ್ಟವಾಗಿದೆ. ಎಂದು ಹೇಳಿದ್ದೀರಿ. ಅದನ್ನು ಕೊಡುತ್ತಿದ್ದಾರೋ ಏನೋ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು : - ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸಾಕಷ್ಟು ಉತ್ತರವೂ ಆಗಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ : - ಚರ್ಚೆಯಾಗಿದೆ. ಪರಿಹಾರ ಆಗಿಲ್ಲ. ಚರ್ಚೆಗಿಂತ ನಮಗೆ ಪರಿಹಾರ ಬೇಕು.

ಅಧ್ಯಕ್ಷರು : - ಪಿ.ಜಿ.ಆರ್ ಸಿಂಧ್ಯಾ ಅವರೇ, ತಮ್ಮ ಪ್ರಶ್ನೆ ಕೇಳಿ.

ವಿಷಯ : ರೇಷ್ಮೆ ಗೂಡಿನ ಬೆಂಬಲ ಬೆಲೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 126 (517)

ಶ್ರೀ .ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಬೆಳೆಗಾರರಿಗೆ ಹಾಗೂ ರೇಷ್ಮೆ ಮಾರಾಟ ಮಾಡುವವರಿಗೆ ಬೆಂಬಲ ಬೆಲೆ ಕೊಡಲು ಸರ್ಕಾರದ ನಿರ್ಧಾರ ಕಾರ್ಯಗತ ಆಗಿದೆಯೇ?

ಆ) ರೇಷ್ಮೆ ಗೂಡಿನ ಹೆಲೆ ಕಡಿಮೆಯಾಗುವ ದಿಕ್ಕಿನಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯಸರ್ಕಾರ ಕೊಟ್ಟಿರುವ ಮನವಿಗೆ ಪುರಸ್ಕಾರ ಸಿಕ್ಕಿದೆಯೇ?

ಇ) ಸಿಕ್ಕಿದ್ದಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ : ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಕಚ್ಚಾ ರೇಷ್ಮೆಗೆ ಕನಿಷ್ಠ ಬೆಲೆಯನ್ನು ಕೊಡಲು ಸರ್ಕಾರದ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ.

ಆ) ಸಿಕ್ಕಿದೆ

ಇ) 1. ರಫ್ತು ಮಾಡಿದ ಮೌಲ್ಯದ ಬೆಲೆ ಆಧಾರಗಳ ಮೇಲೆ ಮುಂಗಡ ರಹದಾರಿ ಕೊಡುವ ಬದಲಾಗಿ ರಫ್ತು ಮಾಡಲು ಉಪಯೋಗಿಸಿದ ರೇಷ್ಮೆ ಪ್ರಮಾಣದ ಮೇಲೆ ನೀಡುವುದು.

2. ರೇಷ್ಮೆ ವಸ್ತುಗಳನ್ನು ಶುದ್ಧ ಉಡುಪುಗಳನ್ನು ಹಾಗೂ ಇತರೆ ತಯಾರಾದ ವಸ್ತುಗಳನ್ನು ರಫ್ತು ಮಾಡುವುದಕ್ಕಿಂತ ಮುನ್ನಾ ಕೇಂದ್ರ ರೇಷ್ಮೆ ಮಂಡಳಿ ಪರಿಶೀಲಿಸಿ ಒಪ್ಪಿಗೆ ನೀಡುವುದು.

3. ಆಮದು ಮಾಡಿಕೊಳ್ಳುವ ರೇಷ್ಮೆ ಹಾಗೂ ರಫ್ತು ಮಾಡಬೇಕೆಂದಿರುವ ಸರಕುಗಳ ಪ್ರಮಾಣ 14:1 ಕೆ.ಜಿ.ಗೆ ಬದಲಾಗಿ 1.2 :1 ಕೆ.ಜಿ.ಗೆ ಇಳಿಸಲಾಗಿದೆ.